# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 284

**7 ಅಕ್ಟೋಬರ್ 2025 * ಮಂಗಳವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಜುಗಲ್‌ಬಂದಿ





ಪಂ. ಪ್ರವೀಣ್ ಗೋಡ್ಖಿಂಡಿ (ಬಾನ್ಸುರಿ)
ವಿದ್ವಾನ್ ಆರ್. ಕುಮರೇಶ್ (ವಯೊಲಿನ್)



ವಿದ್ವಾನ್ ಅರ್ಜುನ್ ಕುಮಾರ್
ಮೃದಂಗ



ಪಂ. ರವೀಂದ್ರ ಯಾವಗಲ್
ತಬಲ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ಪಂ. ಪ್ರವೀಣ್ ಗೋಡ್ಖಿಂಡಿಯವರು** ಕಿರಾಣಾ ಘರಾಣೆಯ ಶ್ರೇಷ್ಠ ಕಲಾವಿದರು. ತಂದೆ ವಿದ್ವಾನ್ ವೆಂಕಟೇಶ ಗೋಡ್ಖಿಂಡಿಯವರು ಅವರ ಮೊದಲ ಗುರುಗಳು. ಆರನೆಯ ವಯಸ್ಸಿಗೇ ಸಾರ್ವಜನಿಕ ಕಚೇರಿ ನೀಡಿದವರು ಹೆಸರಾಂತ ಮೃದಂಗ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮರ ಬಳಿ ಶಿಷ್ಯವೃತ್ತಿ ಮುಂದುವರಿಸಿದರು. ಪಾಶ್ಚಾತ್ಯ ಮತ್ತು ಕರ್ನಾಟಕ ಸಂಗೀತದ ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡಿರುವವರು. ಸೂರ್ ಸಿಂಗಾರ್ ಸಂಸತ್ತಿನ 'ಸೂರಮಣಿ' ಪ್ರಶಸ್ತಿ, ಆಕಾಶವಾಣಿ ರಾಷ್ಟ್ರೀಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಪಂ. ಪನ್ನಾಲಾಲ್ ಘೋಷ್ ಸಂಸ್ಮರಣ ಗೌರವ ಪುರಸ್ಕಾರ, ಉಡುಪಿ ಹಾಗೂ ಶೃಂಗೇರಿ ಮಠಗಳಿಂದ 'ಆಸ್ಥಾನ ಸಂಗೀತ ವಿದ್ವಾನ್' ಪ್ರಶಸ್ತಿ ಇವರಿಗೆ ಸಂದಿರುವ ಪ್ರಮುಖ ಪುರಸ್ಕಾರಗಳು. ಬಾನ್ಸುರಿಯಲ್ಲಿ ಆಕಾಶವಾಣಿಯ 'ಎ ಟಾಪ್' ಶ್ರೇಣಿ ಪಡೆದ ಮೊಟ್ಟಮೊದಲ ದಕ್ಷಿಣ ಭಾರತದ ಕಲಾವಿದರು. ದೇಶವಿದೇಶಗಳಲ್ಲಿ ಅಪಾರ ಜನಪ್ರಿಯತೆ. ಬಿ.ಇ. ಪದವೀಧರರು. ಎಲ್ಲ ಹೊಗಳಿಕೆಗಳನ್ನೂ ಮೀರಿ ನಿಲ್ಲುವ ವಿಶೇಷ ಪ್ರತಿಭಾವಂತರು.

**ವಿದ್ವಾನ್ ಆರ್. ಕುಮರೇಶ್‌ರವರು** 'ವಯೊಲಿನ್ ಸಂತ' ಎಂದೇ ಪಿಟೀಲು ವಾದನ ಕ್ಷೇತ್ರದಲ್ಲಿ ಪ್ರಖ್ಯಾತರು. ಐದನೆಯ ವಯಸ್ಸಿಗೇ ಕಚೇರಿ ನೀಡಲು ಪ್ರಾರಂಭಿಸಿದವರು. ಹತ್ತನೆಯ ವರ್ಷಕ್ಕೆ 100 ಕಚೇರಿಗಳನ್ನು ಪೂರೈಸಿದರು. ಹದಿನೇಳನೆಯ ವಯಸ್ಸಿಗೇ ತಮಿಳುನಾಡಿನ ಅಧಿಕೃತ ರಾಜ್ಯ ವಿದ್ವಾಂಸರಾದರು. 'ಕಲೈಮಾಮಣಿ' ಪ್ರಶಸ್ತಿಗೆ ಭಾಜನರಾದ ಕಿರಿಯ ಕಲಾವಿದರು. ಆಕಾಶವಾಣಿಯ 'ಎ ಟಾಪ್' ಕಲಾವಿದರು. 'ರಾಗಪ್ರವಾಹ' ಮತ್ತು 'ತಾಳಪ್ರವಾಹ' ಎಂಬ ನೂತನ ಪರಿಕಲ್ಪನೆಗಳನ್ನು ಪರಿಚಯಿಸಿದರು. ಚೆನ್ನೈನ ಮಾರ್ಗಳಿ ಉತ್ಸವ, ಸವಾಯಿ ಗಂಧರ್ವ ಸಂಗೀತ ಸಮ್ಮೇಳನಗಳಲ್ಲಿ, ಅಮೆರಿಕ, ಲಂಡನ್, ಪ್ಯಾರಿಸ್ ಮುಂತಾದೆಡೆಗಳಲ್ಲಿ ಜುಗಲ್‌ಬಂದಿ

ಹಾಗೂ ದ್ವಂದ್ವ ವಾದನಗಳಲ್ಲೂ ಪಾಲ್ಗೊಂಡಿದ್ದಾರೆ. 'ಕಲರ್ಸ್ ಆಫ್ ಇಂಡಿಯಾ', 'ಕರ್ನಾಟಕ್ ಚಿಲ್ಸ್', 'ಮನೋರಂಜನಿ', 'ಸ್ಪಾರ್ಕ್', 'ಬೋಯಿಂಗ್ ವಿತ್ ಮಿಶನ್' ಮುಂತಾದ ಇವರ ಆಲ್ಬಂಗಳು ಜನಪ್ರಿಯವಾಗಿವೆ. ಚಲನಚಿತ್ರಗಳಲ್ಲಿ ನಟನೆ, ಸಂಗೀತ ನಿರ್ದೇಶನವನ್ನೂ ಮಾಡಿದ್ದಾರೆ. 'ಲೆಸನ್ಸ್ ಇನ್ ಫರ್ಗೆಟಿಂಗ್' ಸಿನಿಮಾ ಸಂಗೀತಕ್ಕಾಗಿ ಪ್ರಶಸ್ತಿ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕೃತರಾದ ಇವರು ಸಂಗೀತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೊಸ ಹೊಸ ಚಿಂತನೆಗಳ ಆದ್ಯ ಪ್ರವರ್ತಕರು.

**ವಿದ್ವಾನ್ ಅರ್ಜುನ್ ಕುಮಾರ್‌ರವರು** ಕರ್ನಾಟಕದ ಹಿರಿಯ ಮೃದಂಗ ಕಲಾವಿದರು. ತಂದೆ ವಿದ್ವಾನ್ ಅರ್ಜುನ್‌ರವರ ಬಳಿ ಪ್ರಾರಂಭಿಕ ಶಿಕ್ಷಣ, ಅನಂತರ ಲಯವಾದ್ಯ ಪ್ರವೀಣ ವಿದ್ವಾನ್ ಟಿ.ಎ.ಎಸ್. ಮಣಿಯವರಲ್ಲಿ ಶಿಕ್ಷಣ ಮುಂದುವರಿಕೆ. ಸಂಪ್ರದಾಯದಲ್ಲಿ ನಿಷ್ಠೆ, ಹೊಸತನದ ಅನ್ವೇಷಣೆ ಇವರ ವೈಶಿಷ್ಟ್ಯ. ಅಸಂಖ್ಯಾತ ಹಿರಿಯ ಕಲಾವಿದರುಗಳಿಗೆ ಪಕ್ಕವಾದ್ಯ ನುಡಿಸಿದ ಖ್ಯಾತಿ. ಕೇಂದ್ರ ಸರ್ಕಾರದ ಶಿಷ್ಯವೇತನ ಪಡೆದು ಪದ್ಮಭೂಷಣ ಸಂಗೀತಕಲಾನಿಧಿ ಡಾ. ಉಮಯಾಳಪುರಂ ಕೆ. ಶಿವರಾಮನ್‌ರವರ ಬಳಿ ಶಿಷ್ಯವೃತ್ತಿ ಮುಂದುವರಿಸಿದರು. ದೇಶವಿದೇಶಗಳಲ್ಲಿ ಅವರ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಜುಗಲ್‌ಬಂದಿ, ದ್ವಂದ್ವ ಕಚೇರಿ ಪ್ರಕಾರಗಳಲ್ಲಿಯೂ ಪರಿಣತರಾಗಿರುವವರು. ಆಕಾಶವಾಣಿಯ ಎ-ಟಾಪ್ ಶ್ರೇಣಿ ಕಲಾವಿದರು. ಹಲವಾರು ಪುರಸ್ಕಾರಗಳು ಲಭಿಸಿವೆ. ಸಾಂಪ್ರದಾಯಿಕ ಕಲೆಗಳು ಮತ್ತು ಪರಂಪರೆಯ ಅಭಿವೃದ್ಧಿಗಾಗಿ ಬೆಂಗಳೂರಿನಲ್ಲಿ 'ಅನುಭೂತಿ' ಸಂಸ್ಥೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಟ್ರಸ್ಟಿಗಳೂ ಆಗಿದ್ದಾರೆ.

**ಪಂ. ರವೀಂದ್ರ ಯಾವಗಲ್‌ರವರು** ತಂದೆ ಶ್ರೀ ರಾಮಚಂದ್ರ ಯಾವಗಲ್‌ರವರ ಬಳಿ ತಬಲ ವಾದನದ ಪ್ರಾಥಮಿಕ ಶಿಕ್ಷಣ ಪಡೆದರು. ಅನಂತರ ಪಂ. ಶೇಷಗಿರಿ ಹಾನಗಲ್‌ರವರ ಬಳಿ ತರಬೇತಿ. ಇವರು ಕಿರಿಯ ವಯಸ್ಸಿನಲ್ಲಿಯೇ ಕುಂದಗೋಳದ ಸವಾಯಿ ಗಂಧರ್ವ ಮಹೋತ್ಸವದಲ್ಲಿ ಪಾಲ್ಗೊಂಡ ಹಿರಿಮೆ ಹೊಂದಿದ್ದಾರೆ. ಬೆಂಗಳೂರು ಆಕಾಶವಾಣಿಯಲ್ಲಿ ನಾಲ್ಕು ದಶಕಗಳಷ್ಟು ಕಾಲ ಸೇವೆ ಸಲ್ಲಿಸಿರುವರು. ದೇಶವಿದೇಶಗಳಲ್ಲಿ ಅಸಂಖ್ಯಾತ ಸಂಗೀತ ದಿಗ್ಗಜರಿಗೆ ಪಕ್ಕವಾದ್ಯ ಸಹಕಾರ ನೀಡಿರುವರು; ಏಕವ್ಯಕ್ತಿ ವಾದನದಲ್ಲೂ ನೈಪುಣ್ಯತೆ ಹೊಂದಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ; ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಜೀವಮಾನ ಸಾಧನೆಗಾಗಿ 'ಕರ್ನಾಟಕ ಕಲಾಶ್ರೀ' ಗೌರವ ಪುರಸ್ಕಾರ; ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪುರಸ್ಕಾರಗಳು ಇವರಿಗೆ ದೊರೆತಿರುವ ಪ್ರಮುಖ ಪ್ರಶಸ್ತಿಗಳು.

## ಬೆಳದಿಂಗಳ ಸಂಗೀತ 285

**5 ನವೆಂಬರ್ 2025**



**ಗಾಯನ**

**ವಿದುಷಿ ಲಕ್ಷ್ಮಿ ನಾಗರಾಜ್**



**ವಯೊಲಿನ್**

**ವಿದ್ವಾನ್ ಕೃಷ್ಣ ಪ್ರಸಾದ್**



**ಮೃದಂಗ**

**ವಿದ್ವಾನ್ ಎಚ್. ಹರಿಹರನ್**

**ಫೋನ್: 0821–2548221, 2548223 * ಇಮೇಲ್: sutturmath@jssonline.org**